

ರಾಮ್‌ಗೋಪಾಲ್ ವರ್ಮಾ ಅವರ ಆಪ್ತವಾದ ವಿವರಣೆ ಬೆಳಕು ಚೆಲ್ಲುತ್ತದೆ. ಅಂದ ಹಾಗೆ, ಆ ಅಮರ ಚೆಲುವೆಯ ಆರಾಧಕರಾಗಿದ್ದ ವರ್ಮಾ, ಆಕೆಯನ್ನೇ ನಾಯಕಿಯನ್ನಾಗಿ ಮಾಡಿಕೊಂಡು 'ಕ್ಷಣ ಕ್ಷಣಂ', 'ಗೋವಿಂದ, ಗೋವಿಂದ' ಎಂಬ ಚಿತ್ರಗಳನ್ನೂ ನಿರ್ದೇಶಿಸಿದ್ದರು.

'ವಕೀಲರಾಗಿದ್ದ ಅಪ್ಪ ಅಯ್ಯಪ್ಪನ್ ಇರುವಷ್ಟು ಕಾಲ ಶ್ರೀದೇವಿ ಆಕಾಶದಲ್ಲಿ ಸ್ವಚ್ಛಂದವಾಗಿ ಹಾರುತ್ತಿದ್ದ ಹಕ್ಕಿಯಾಗಿದ್ದಳು. ಆದರೆ, ಅವರ ನಿಧನದ ನಂತರ ಅಮ್ಮ ರಾಜೇಶ್ವರಿಯವರ ಪಂಜರದಲ್ಲಿ ಬಂಧಿಯಾಗಿಬಿಟ್ಟಳು. ಆಗಿನ ದಿನ–ಗಳಲ್ಲಿ ಕಲಾವಿದರಿಗೆ ಸಂಭಾವನೆಯ ರೂಪದಲ್ಲಿ ಸಿಗುತ್ತಿದ್ದುದು ಬಹುತೇಕ ಕಪ್ಪುಹಣ. ತೆರಿಗೆ ದಾಳಿಯ ಭಯದಲ್ಲಿದ್ದ ಅವರಪ್ಪ, ಸ್ನೇಹಿತರು ಹಾಗೂ ಸಂಬಂಧಿಗಳಲ್ಲಿ ಆ ಸಂಪತ್ತನ್ನು ಕೂಡಿಟ್ಟಿದ್ದರು. ಅವರು ಕಣ್ಮುಚ್ಚುತ್ತಿದ್ದಂತೆಯೇ ಹಣ ಪಡೆದವರೆಲ್ಲರೂ ಕೈಕೊಟ್ಟರು' ಎಂದು ಈ ಬಾಲಿವುಡ್ ಧ್ರುವತಾರೆಯ ಬದುಕಿನ ಮೇಲೆ ವರ್ಮಾ ಒಳನೋಟ ಬೀರುತ್ತಾರೆ.

'ಅಷ್ಟಾಗಿ ವ್ಯವಹಾರಿಕ ಜ್ಞಾನ ಇಲ್ಲದಿದ್ದ ಅವರಮ್ಮ ವ್ಯಾಜ್ಯದಲ್ಲಿದ್ದ ಆಸ್ತಿಗಳ ಮೇಲೆ ಹೂಡಿಕೆ ಮಾಡಿ ಕೈಸುಟ್ಟುಕೊಂಡರು. ಹೀಗಾಗಿ ಶ್ರೀದೇವಿ ಬದುಕಿನಲ್ಲಿ ಬೋನಿ ಎಂಟ್ರಿ ಕೊಡುವ ವೇಳೆಗೆ ಆಕೆಯ ಕೈಯೆಲ್ಲಾ ಖಾಲಿಯಾಗಿತ್ತು. ಆಗ ಬೋನಿ ಸಹ ಸಾಲ ಮಾಡಿಕೊಂಡು ಸಂಕಷ್ಟದಲ್ಲಿದ್ದರು. ಈ ನಟಿಗೆ ಆ ಕ್ಷಣದಲ್ಲಿ ಸಿಕ್ಕಿದ್ದೇನೆಂದರೆ ಮುಖವಿಟ್ಟು ಅಳುವುದಕ್ಕೆ ಆತನ ಭುಜವೊಂದೇ' ಎನ್ನುವುದು ವರ್ಮಾ ಮಾರ್ಮಿಕ ಮಾತು.

ಶ್ರೀದೇವಿಯ ಜೀವನಗಾಥೆಯನ್ನೇ ಇಟ್ಟುಕೊಂಡು ಈಗ ಸಾಕ್ಷ್ಯಚಿತ್ರ–ವೊಂದನ್ನು ನಿರ್ಮಿಸಲು ರಾಂಗೋಪಾಲ್ ವರ್ಮಾ ಹೊರಟಿದ್ದಾರೆ. ಕಥೆಯ ಹಕ್ಕು ಸಿಕ್ಕ ಕೂಡಲೇ ಈ ಸಾಕ್ಷ್ಯಚಿತ್ರ ಆರಂಭವಾಗಲಿದೆ ಎನ್ನುವುದು ಅವರ ಶಿಷ್ಯರೊಬ್ಬರ ಮಾತು.

'ಬಾಲಿವುಡ್ ಚಾಂದನಿ'ಯ ಬದುಕಿನ ಕತ್ತಲೆ ಕಥೆ ಇಷ್ಟಕ್ಕೆ ಮುಗಿಯುವು–ದಿಲ್ಲ. ಅನಾರೋಗ್ಯದಿಂದ ಬಳಲುತ್ತಿದ್ದ ಅವರಮ್ಮ ಅಮೆರಿಕದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದಾಗ ವೈದ್ಯರು ಎಸಗಿದ ಪ್ರಮಾದದಿಂದ ಸಾವನ್ನಪ್ಪಿದರು. ಆ ಸಂದರ್ಭದಲ್ಲಿ ಈ ನಟಿಯ ಸಹೋದರಿ ಶ್ರೀಲತಾ, ಅಳಿದುಳಿದ ಆಸ್ತಿಯಲ್ಲಿ ಪಾಲು ಕೇಳಿ ಕೋರ್ಟ್ ಮೆಟ್ಟಿಲೇರಿದ್ದರು. ಅಪ್ಪ– ಅಮ್ಮನ ಹೆಸರಿನಲ್ಲಿದ್ದ ಆಸ್ತಿ ಶ್ರೀದೇವಿಯದೇ ಗಳಿಕೆ ಎನ್ನುವ ಅರಿವಿದ್ದೂ ಪರಿಸ್ಥಿತಿಯ ಲಾಭ ಪಡೆಯಲು ನಡೆಸಲಾದ ಕಾನೂನು ಸಮರವದು.

ತವರು ಮನೆಯಲ್ಲಿ ಕಳೆದುಕೊಂಡ ನೆಮ್ಮದಿಯನ್ನು ಆಕೆ ಗಂಡನ ಮನೆ–ಯಲ್ಲಿ ಹುಡುಕುತ್ತಿದ್ದರು. ಆದರೆ, ಪಂಚತಾರಾ ಹೋಟೆಲ್‌ನ ಲಾಬಿಯಲ್ಲಿ ಬೋನಿಯವರ ಅಮ್ಮನಿಂದಲೇ 'ಮನೆಮುರುಕಿ' ಎಂಬ ಪಟ್ಟ ಕಟ್ಟಿಸಿಕೊಂಡು, ಹೊಟ್ಟೆಗೆ ಗುದ್ದಿಸಿಕೊಂಡು ಸಾರ್ವಜನಿಕವಾಗಿಯೇ ಅವಮಾನಕ್ಕೆ ಒಳಗಾದದ್ದೂ ನಡೆಯಿತು.

ಶ್ರೀದೇವಿಗೆ ತನ್ನ ಚೆಲುವಿನ ಬಗೆಗೆ ಈ ನಟಿಗೆ ಅಪರಿಮಿತ ಕಾಳಜಿ ಇತ್ತು. ಮೈಮಾಟದಲ್ಲಿ ಏನೊಂದೂ ಏರು–ಪೇರು ಆಗದಂತೆ ಹಾಗೂ ಸುಕ್ಕುಗಳನ್ನು ಹೋಗಲಾಡಿಸಿಕೊಳ್ಳಲು ಚರ್ಮಕ್ಕೆ ಮೇಲಿಂದ ಮೇಲೆ ಮಾಡಿಸಿಕೊಂಡ ಕಾಸ್ಮೆಟಿಕ್ ಶಸ್ತ್ರಚಿಕಿತ್ಸೆಗಳ ಕುರಿತ ಗುಟ್ಟಿನ ಕಥೆಗಳು ಬಾಲಿವುಡ್ ಅಂಗಳದಲ್ಲಿ ರಟ್ಟಾಗಿ ವರ್ಷಗಳೇ ಗತಿಸಿವೆ.

## ಸಿನಿಮಾ ಬದುಕು

ಸೆಲ್ಯೂಲಾಯ್ಡ್‌ನಲ್ಲಿ ನಾಯಕಿಯರೆಂದರೆ ಬೊಂಬೆಗಳು ಅಥವಾ ದೇವತೆಯರು ಎಂಬ ಇಮೇಜ್ ಇದ್ದ ಕಾಲದಲ್ಲೇ ಬಾಲಿವುಡ್‌ಗೆ ಎಂಟ್ರಿಕೊಟ್ಟ ಶ್ರೀದೇವಿ, ತುಂಟತನದ ಅಭಿನಯದಿಂದ ಕೋಟ್ಯಂತರ ಪಡ್ಡೆಗಳ ಹೃದಯ ಕದ್ದವರು. ಪರದೆಯ ಮೇಲೆ ಆಕೆ ಕಣ್ಣು ಮಿಟುಕಿಸಿದರೆ ಅದು ತನಗಾಗಿಯೇ ಎಂದು ಆಗಿನ ಕಾಲದ ಯುವಕರು, ಹೈರಾಣಾಗುತ್ತಿದ್ದರು. ಆಕೆಯ ಅಭಿನಯದಲ್ಲಿ ಕಾಣುತ್ತಿದ್ದ ತುಂಟತನ ಎಂಥವರನ್ನೂ ಫಿದಾ ಮಾಡುತ್ತಿತ್ತು. ಸಮಕಾಲೀನ ಸಂದರ್ಭದಲ್ಲಿ ನಟಿಯರ ಅಭಿಯನಕ್ಕಿದ್ದ ಅಲಿಖಿತ ಕಟ್ಟಳೆಯ ಲಕ್ಷ್ಮಣ ರೇಖೆಯನ್ನು ಆಕೆ ಮೀರಿನಿಂತರು. ಆದ್ದರಿಂದಲೇ 'ಸುಹಾಗನ್' ತರಹದ ಚಿತ್ರಗಳು ಯಶಸ್ವಿಯಾದವು. ಹೌದು, ಅವರ ಇಂತಹ ನಡೆ ಆಗ ಪ್ರವಾಹದ ವಿರುದ್ಧದ ಈಜಾಗಿತ್ತು.

'ಹಿಮ್ಮತ್‌ವಾಲಾ', 'ನಗೀನಾ', 'ಸದ್ಮಾ' ಚಿತ್ರಗಳಲ್ಲಿ ಅವರ ಅಭಿನಯ ಬಹುಕಾಲ ನೆನಪಿನಲ್ಲಿ ಉಳಿಯುವಂಥದ್ದು. ಅಮಿತಾಭ್ ಬಚ್ಚನ್, ಅನಿಲ್ ಕಪೂರ್, ವಿನೋದ್ ಖನ್ನಾ, ರಿಷಿ ಕಪೂರ್, ಕಮಲ್ ಹಾಸನ್ ಅವರಂತಹ ಹೀರೊಗಳಿಗೆ ಸರಿಸಾಟಿಯಾದ ಅಭಿನಯ ಆಕೆಯದಾಗಿತ್ತು. 'ಚಾಲ್‌ಬಾಜ್' ಹಾಗೂ 'ಲಮ್ಹೆ' ಸೇರಿ ಆರು ಚಿತ್ರಗಳಲ್ಲಿ ಆಕೆಗೆ ದ್ವಿಪಾತ್ರ ಅಭಿನಯದ ಅವಕಾಶಗಳು ಒದಗಿಬಂದಿದ್ದವು. ಬಾಕ್ಸ್ ಆಫೀಸ್ ಸಮರದಲ್ಲಿ ಗೆಲ್ಲುವಂತಹ ಅಭಿನಯ ಚತುರೆಯಾದ ಈ ನಟಿ, ಹೀರೊಗಳಿಗೆ ಸಿಗುವಂತಹ ಪ್ರಾಮುಖ್ಯತೆಯನ್ನೇ ಗಿಟ್ಟಿಸಿದ್ದರು.

'ಮಿಸ್ಟರ್ ಇಂಡಿಯಾ' ಚಿತ್ರದ ವೇಳೆಗೆ ಆಕೆ, ಪುರುಷ ಕಲಾವಿದರನ್ನೂ ಮೀರಿ ಏಕಾಂಗಿಯಾಗಿ ಸಿನಿಮಾ ಗೆಲ್ಲಿಸಿಕೊಡುವ ಮಟ್ಟಕ್ಕೆ ಬೆಳೆದಿದ್ದರು. ಅದು ಬೋನಿ ಕಪೂರ್ ನಿರ್ಮಾಣದ ಚಿತ್ರ. ಶ್ರೀದೇವಿಯ ಸನಿಹ ಬಯಸಿ ಹಲವು ಸಲ ಪ್ರಯತ್ನಿಸಿದ್ದ ಬೋನಿ ಕಪೂರ್, ಈ ಚಿತ್ರಕ್ಕೆ ಶ್ರೀದೇವಿ 10 ಲಕ್ಷ ರೂಪಾಯಿ ಸಂಭಾವನೆ ಕೇಳಿದಾಗ, 11 ಲಕ್ಷ ರೂಪಾಯಿ ಕೊಟ್ಟಿದ್ದರು! ಆರಂಭದಲ್ಲಿ ಅಂತರ ಕಾಯ್ದುಕೊಂಡಿದ್ದ ಶ್ರೀದೇವಿ, ಅಲ್ಲಿಂದಾಚೆಗೆ ನಿಧಾನಕ್ಕೆ ಬೋನಿ ಕಪೂರ್‌ಗೆ ಹತ್ತಿರವಾಗಿದ್ದರು.

'ಚಾಲ್‌ಬಾಜ್' ಚಿತ್ರದ 'ಕಿಸಿ ಕೇ ಹಾತ್ ನ ಆಯೇಗಿ ಯೇ ಲಡಿಕಿ', 'ಲಮ್ಹೆ' ಸಿನಿಮಾದ 'ಮೋರ್‌ನೀ ಬಾಗಾ ಮೇ ನಾಚೇ' ಹಾಡುಗಳನ್ನು ಯಾರಾದರೂ ಮರೆಯಲು ಸಾಧ್ಯವೇ? ಅದು 'ನಗೀನಾ' ಇರಲಿ, 'ನಿಗಾಹೇ' ಇರಲಿ, 'ಆರ್ಮಿ' ಇರಲಿ, 'ಚಾಲ್‌ಬಾಜ್' ಇರಲಿ, ಹೀರೊಗಳೆಲ್ಲ ಅತಿಥಿ ಕಲಾವಿದರ ಮಟ್ಟಕ್ಕೆ ಇಳಿಯುವಷ್ಟು ಆ ಸಿನಿಮಾಗಳನ್ನು ಶ್ರೀದೇವಿ ಆಕ್ರಮಿಸಿಬಿಟ್ಟಿದ್ದರು. ಅವರಿಗೆ ಸಿದ್ಧಿಸಿದ್ದ ಮುಗ್ಧ ಹಾಗೂ ಮಾದಕ ನೋಟವೇ ಅವರನ್ನು ಇತರ ನಟಿಯರಿಗಿಂತ ಎತ್ತರದ ಸ್ಥಾನದಲ್ಲಿ ನಿಲ್ಲಿಸಿತ್ತು. ಸಮಕಾಲೀನ ಹೀರೊಗಳಿಗೆ ಸರಿಸಾಟಿಯಾದ ನಟನಾ ಕೌಶಲ ಹೊಂದಿದ್ದ ಅವರಿಗೆ, ಪ್ರಬುದ್ಧ ಹಾಸ್ಯ ಕಲಾವಿದರನ್ನೂ ಮೀರಿಸುವಂತಹ ಹಾಸ್ಯ ಪಾತ್ರಾಭಿನಯದ ಕಲೆಯೂ ಸಿದ್ಧಿಸಿತ್ತು. ಚಾರ್ಲಿ ಚಾಪ್ಲಿನ್ ಅವರನ್ನು ಅನುಕರಿಸುವ ಕಲೆ ಬಾಲಿವುಡ್‌ನಲ್ಲಿ ಯಾರಿಗಾದರೂ ಸಿದ್ಧಿಸಿದ್ದರೆ ಅದು ಶ್ರೀದೇವಿಗೆ ಮಾತ್ರ. ಅವರ ಅಭಿನಯದ ಕೆಟ್ಟ ಚಿತ್ರಗಳು ಇಲ್ಲವೇ ಇಲ್ಲ ಎಂದೇನಿಲ್ಲ. ಆದರೆ, ಅವುಗಳಿಂದ 'ಇಮೇಜ್' ಹಾಳಾಗದಷ್ಟು ಎತ್ತರಕ್ಕೆ ಆಕೆ ಬೆಳೆದು ನಿಂತಿದ್ದರು.

ಆಕೆ 'ಚಾಂದಿನಿ'ಯಾಗಲು ತೂಕವನ್ನು ಕಳೆದುಕೊಂಡಿದ್ದು ಈಗ ದಂತಕಥೆ. ಬಹುಕಾಲದ ಬಿಡುವಿನ ನಂತರ ಬಂದ 'ಇಂಗ್ಲಿಷ್ ವಿಂಗ್ಲಿಷ್' ಸಿನಿಮಾದಲ್ಲಿ ಆಕೆ ಗೌರವ ಹಾಗೂ ಪ್ರೀತಿಗಾಗಿ ಹಪಹಪಿಸುತ್ತಿದ್ದ ಗೃಹಣಿ 'ಶಶಿ ಗೋಡಬೋಲೆ'ಯಾಗಿ ಅಭಿನಯಿಸಿದ ರೀತಿ ಚಿತ್ರಪ್ರಿಯರ ಮನದಂಗಳದಲ್ಲಿ ಸದಾ ಹಸಿರಾಗಿ ಕಾಡುವಂಥದ್ದು. ಐವತ್ತು ವರ್ಷಗಳ ಸೆಲ್ಯೂಲಾಯ್ಡ್ ಯಾತ್ರೆಯಲ್ಲಿ 300ಕ್ಕೂ ಅಧಿಕ ಸಿನಿಮಾಗಳನ್ನು ಕೊಟ್ಟ ದಕ್ಷಿಣ ಭಾರತದ ಅಭಿಜಾತ ಕಲಾವಿದೆ ಆಕೆ. ಅಂದ ಹಾಗೆ, ಕನ್ನಡದಲ್ಲೂ ಈ ಕಲಾವಿದೆ ನಟಿಸಿದ್ದಾರೆ. 'ಭಕ್ತ ಕುಂಬಾರ'ದಲ್ಲಿ ಆಕೆ ತೋರಿದ ಅಭಿನಯದ ಕುರಿತು ಹಿರಿಯ ಕಲಾವಿದೆ ಲೀಲಾವತಿ ಈಗಲೂ ನೆನೆಯುತ್ತಾರೆ.

ಶ್ರೀದೇವಿ ಕ್ಯಾಮೆರಾ ಮುಂದೆ ನಿಂತರೆ ಗೋಲಿ ಒಡೆದ, ಗುಳ್ಳೆಗಳಿಂದ ಕೂಡಿದ ಸೋಡಾದಂತೆ ಅಮಿತೋತ್ಸಾಹದಿಂದ ನಟನೆಗೆ ಇಳಿಯುತ್ತಿದ್ದರು. ಆದರೆ, ಕ್ಯಾಮೆರಾ ಬಂದ್ ಆದ ಮರುಕ್ಷಣವೇ ಗುಳ್ಳೆಗಳನ್ನು ಕಳೆದುಕೊಂಡ ಸೋಡಾ–ದಂತೆ ಮೌನಕ್ಕೆ ಜಾರುತ್ತಿದ್ದರು. ನಿರ್ಭಾವುಕ ಮೊಗದಲ್ಲಿ ತಮ್ಮೆಲ್ಲ ನೋವನ್ನು ಅಡಗಿಸಿಡುತ್ತಿದ್ದರು. ಚಟುವಟಿಕೆಯಿಂದ ಇರುತ್ತಿದ್ದ ವಾಕಿ–ಟಾಕಿ ಗೊಂಬೆ, ಅದರಿಂದ ಬ್ಯಾಟರಿ ತೆಗೆದಾಗ ನಿಸ್ತೇಜವಾಗುವಂತೆ ಅಭಿನಯ ಇಲ್ಲದಿದ್ದಾಗ ಈ ನಟಿಯ ಉತ್ಸಾಹ ಎಲ್ಲೋ ಅಡಗಿಹೋಗುತ್ತಿತ್ತು. ಯಾವುದೋ ಲೋಕದಲ್ಲಿ ಆಕೆ ವಿಹರಿಸುತ್ತಿದ್ದರು ಎಂದು ಆಗಿನ ಜಮಾನದ ಕಲಾವಿದರು ನೆನೆಯುತ್ತಾರೆ.

ಹೌದು, ಅವರ ಸ್ಟಾರ್ ವ್ಯಕ್ತಿತ್ವದ ಹಿಂದೆ ದೌರ್ಬಲ್ಯಗಳೆಲ್ಲ ಅಡಗಿ ಕುಳಿತಿದ್ದವು. ಬದುಕಿನ ಪರಮ ರಹಸ್ಯಗಳು ಅಲ್ಲಿಯೇ ಬಂದಿಯಾಗಿದ್ದವು. ಒಂದೊಮ್ಮೆ ಮಿಥುನ್ ಚಕ್ರವರ್ತಿ ಜತೆ ಈ ನಟಿ ಸಂಬಂಧ ಹೊಂದಿದ್ದಾರೆ ಎಂಬ ಗುಲ್ಲು ಆಗ ಜೋರಾಗಿ ಹರಡಿತ್ತು. ಆಕೆ ನಿರ್ಮಾಪಕ ಬೋನಿಯವರ ಕೈಹಿಡಿದಾಗ ಅಂತಹ ಗಾಳಿಮಾತುಗಳಿಗೆಲ್ಲ ತೆರೆ ಬಿದ್ದಿತ್ತು. ಬದುಕಿನುದ್ದಕ್ಕೂ ಅಭದ್ರತೆಯ ಭಾವದಲ್ಲೇ ಇದ್ದ ಶ್ರೀದೇವಿ, ಇತ್ತೀಚೆಗೆ ಪುತ್ರಿಯರ ಭವಿಷ್ಯದ ಬಗೆಗೆ ಚಿಂತಿತರಾಗಿದ್ದರು. ಆಕೆಯ ಹಿರಿಯ ಪುತ್ರಿ ಜಾಹ್ನವಿ ಅಭಿನಯದ ಚಿತ್ರ 'ಧಡಕ್' ಬಿಡುಗಡೆಗೆ ಮುನ್ನವೇ ಬದುಕಿನಿಂದಲೇ ಬಿಡುಗಡೆ ಹೊಂದಿದ್ದಾರೆ ಬೆಳ್ಳಿ ತೆರೆಯ ಈ ಅನಭಿಷಿಕ್ತ ಸಾಮ್ರಾಜ್ಞಿ. ●